'ಸ್ವಧರ್ಮೇ ನಿಧನಂ ಶ್ರೇಯಃ' ಎಂದು ಭಗವಂತನೇ ಮಹಾಭಾರತದಲ್ಲಿ ಹೇಳಿದ್ದಾನೆ. ಮಹಾಭಾರತದಲ್ಲಿ ಅರ್ಜುನನಿಗೆ ಸ್ವಧರ್ಮ 'ಯುದ್ಧಕಾರ್ಯ'ವಾಗುತ್ತದೆ. ಯಾವುದು ಲೋಕಕ್ಕೆ ಸಾಧಕವೋ ಅದು ಸ್ವಪ್ರಯೋಜನದೃಷ್ಟಿ ಇಲ್ಲದೆ ನೋಡುವುದಿಲ್ಲವೋ ಆಗ, ಆ ಕರ್ಮದಲ್ಲಿ ಅನುಷಂಗಿಕವಾದ ಪಾಪ ಅಂಟುವುದಿಲ್ಲ . ಧೈರ್ಯದಿಂದಿರು' - ಅಪ್ಪ

ನನಗರಿವಿಲ್ಲದೆಯೇ ಪತ್ರವನ್ನು ಓದಿಬಿಟ್ಟಿದ್ದೆ. ತಾತನ ಬಗ್ಗೆ ಮತ್ತೂ ಗೌರವ ತುಂಬಿತು. ನನ್ನ ಅವಿದ್ಯಾವಂತ ತಂದೆ ಬದುಕಿದ್ದರೂ ಈ ಬೋಧನೆಯನ್ನು ಕೊಡುತ್ತಿದ್ದನೇ ಎಂದು ಯೋಚಿಸುತ್ತಾ, ಎದ್ದು ಬಂದು ತಾತನ ಪಕ್ಕವೇ ಕುಳಿತು, ಡೈರಿಯ ಆರಂಭದ ಪುಟಗಳತ್ತ ಕಣ್ಣು ಹಾಯಿಸತೊಡಗಿದೆ.

ಕೆಲವು ಅರ್ಥಂಬರ್ಥ, ಇನ್ನು ಕೆಲವೆಲ್ಲಾ ಪುಟದ ತುಂಬಾ ಬರೆದು, ಮಾರ್ಜಿನ್‌ನ್ನಲ್ಲೆಲ್ಲಾ ಗೀಚಿದ್ದರು. 'ಕೋಲ್ಮಿಂಚು' ಎಂಬ ಶೀರ್ಷಿಕೆಯ ಪುಟವನ್ನು ಓದಲು ಹಿಡಿದೆ . ತಾತನ ಒಕ್ಕಣೆ ಹೀಗಿತ್ತು .

ಕೋಲ್ಮಿಂಚು -

'ನನಗೆ ಆಗ ಇಪ್ಪತ್ತಾರು. ನನ್ನ ಸ್ನೇಹಿತನ ಮದುವೆಗೆಂದು ಗೊಲ್ಲಹಳ್ಳಿಗೆ ಹೋಗಿದ್ದೆ. ವರಪೂಜೆಗೆ ಗಂಡಿನೊಂದಿಗೆ ಕಾಶಿಯಾತ್ರೆಯಲ್ಲಿ ಹೆಜ್ಜೆ ಹಾಕಿದ್ದ ಆಪ್ತ ಸ್ನೇಹಿತರಲ್ಲಿ ನಾನೊಬ್ಬ ಮಾತ್ರ ಕಾಲು ಪೆಟ್ಟು ಮಾಡಿಕೊಂಡದ್ದರಿಂದ ಹಿಂದೆಯೇ ಉಳಿದೆ. ಗಂಡಿನ ಮನೆಯವರೆಲ್ಲಾ ದಿಬ್ಬಣದಲ್ಲಿ ಪಾಲ್ಗೊಳ್ಳಲು ಹೊರಟರು. ನಾನು ಜಗಲಿಯಲ್ಲಿ ಕಾಲು ಅಲ್ಲಾಡಿಸುತ್ತಾ ಕುಳಿತು ಅತ್ತಿತ್ತ ನೋಡಿದೆ. ಅಲಂಕೃತ ಬಾಳೆ ಕಂಬದ ಹಿಂದೆ ಯಾರದ್ದೋ ತಲೆ ಮತ್ತೆ ಮತ್ತೆ ಇಣುಕಿದಂತಾಯಿತು. ಇದೇನಿದು ಎಲ್ಲರೂ ಹೋಗಿರುವಾಗ ಉಳಿದವರು ಯಾರು ಎಂದು ಮೇಲೆದ್ದು ಅತ್ತ ಹೋದೆ. ಕೂಡಲೇ , ಬಾಗಿಲ ಹಿಂದೆ ಹೆಣ್ಣೊಂದು ಓಡಿಹೋದಂತಾಯಿತು. ವಾರೆಯಾದ ಬಾಗಿಲಬಳಿ ಹೋದೆ. ಸೂರ್ಯನ ಕೋಲೊಂದು ಮಾಡಿನ ಹೆಂಚಿನ ಸೀಳಿನಿಂದ ಅವಳ ಮೇಲೆ ಬಿದ್ದು ಮುಖ ಸ್ಪಷ್ಟವಾಗಿ ಕಂಡಿತು. ದುಂಬಿ ಕಣ್ಣುಳು ಅತ್ತಿತ್ತ ಆಡಿಸುತ್ತಿದ್ದ ತೆಳು ಹುಡುಗಿ. ಸಾಧಾರಣ ಉಡುಪಿನಲ್ಲಿ ಇವಳು ಮದುವೆಯನ್ನು ಸಂಭ್ರಮಿಸುವ ಯಾವುದೇ ಲಕ್ಷಣಗಳಿಲ್ಲದೆ ಕದ್ದು ಮುಚ್ಚಿ ಇಲ್ಲೇನು ಮಾಡುತ್ತಿದ್ದಾಳೆ ಎಂದು ತಿಳಿಯಲು ಅವಳನ್ನುದ್ದೇಶಿಸಿ 'ಏ ಹುಡುಗಿ, ಯಾರು ನೀನು? ಮದುವೆ ದಿಬ್ಬಣದೊಂದಿಗೆ ಹೋಗದೆ ಇಲ್ಲಿ ಏಕೆ ಇರುವೆ?' ಎಂದು ಕೇಳಿದೆ. ಉತ್ತರ ಕೊಡಲು ಅಂಜಿ ಮುದುರಿ ನಿಂತಳು. ಮತ್ತಷ್ಟು ಹತ್ತಿರ ಹೋಗಿ ಅವಳನ್ನು ಮತ್ತೆ ಪ್ರಶ್ನಿಸಿದಾಗ ಅವಳ ಕಥೆ ಹೇಳಿದಳು. ನನ್ನ ಗೆಳೆಯನ ಸೋದರತ್ತೆಯ ಮಗಳು, ತಾನು ವಿಧವೆ, ಹಾಗಾಗಿ ಮದುವೆಯಲ್ಲಿ ಅಮಂಗಳ ತರಲಾರೆ ಎಂದಳು. ಕೆನ್ನೆಗೆ ಬಾರಿಸಿದಂತಾಯಿತು. ಎಲಾ ಇವಳಾ, ಇಷ್ಟು ಚಿಕ್ಕ ವಯಸ್ಸಿಗೆ ಅಮಂಗಳದ ಮಾತನಾಡುವಳಲ್ಲಾ. ಆಟವಾಡಿಕೊಂಡು ಉತ್ಸಾಹದ ಚಿಲುಮೆಯಂತೆ ಇರಬೇಕಾದವಳು ಇಲ್ಲಿ ಮೂಲೆಯಲ್ಲಿ ನಿಂತು ಇಳಿಮುಖ ಹಾಕುವ ಪರಿಸ್ಥಿತಿ ಬಂದಿತಲ್ಲ, ಇದರಲ್ಲಿ ಇವಳ ತಪ್ಪಾದರೂ ಏನು. ಪಾಪದ ಹುಡುಗಿಯನ್ನು ಮತ್ತೆ ಮಾತಿಗೆಳೆದೆ. ಒಂದೊಂದೇ ಪ್ರಶ್ನೆಯನ್ನು ನಾಲ್ಕು ಬಾರಿ ಕೇಳಿದಾಗ ಮುಂದೆ ಅವಳಿಂದ ದೊರೆತ ಸಾರಾಂಶ ಹೀಗಿತ್ತು.

ಅವಳಿಗೀಗ ಹದಿನಾರು ವರ್ಷ. ಹನ್ನೆರಡಿದ್ದಾಗ ಹತ್ತಿರದ ಊರಿನ ಕರಣಿಕರ ಮಗನೊಂದಿಗೆ ಮಾದುವೆ ಮಾಡಿದರು. ಮದುವೆಯಾದ ಆರು ತಿಂಗಳಲ್ಲೇ ನದಿಗೆ ಈಜಲು ಹೋದ ಹುಡುಗ ಮರಳಲೇ ಇಲ್ಲ. ಇನ್ನೂ ಅತ್ತೆ ಮನೆಗೂ ಕಾಲಿಡುವ ಮುನ್ನವೇ 'ವಿಧವೆ' ಎಂಬ ಬಾಸಿಂಗವನ್ನು ಕಟ್ಟಿಕೊಂಡು ತವರಲ್ಲೇ ಇವಳು ಉಳಿದಳು. ಹಸೆಮಣೆಯಲ್ಲೂ ಗಂಡನ ಮುಖ ನೋಡಿರಲಿಲ್ಲ. ಇಲ್ಲಿಗೆ ತಂದೆ ತಾಯೊಂದಿಗೆ ಬಂದರೂ ಶುಭಕಾರ್ಯದಲ್ಲಿ ಪಾಲ್ಗೊಳ್ಳಲಿಲ್ಲ.

ಈ ವಿಷಯ ಗೊತ್ತಾದ ವಾರದಲ್ಲೇ ಈ ಷೋಡಶಿ ನಮ್ಮ ಮನೆಯ ಹೊಸ್ತಿಲಲ್ಲಿಟ್ಟ ಸೇರಿನ ಅಕ್ಕಿ ಬೆಲ್ಲವನ್ನು ಚಿಮ್ಮಿಸುತ್ತಾ ಬಂದು ಗೃಹಲಕ್ಷ್ಮಿ ಆದಳು. ತಾಯಿಯನ್ನು ಕಳೆದುಕೊಂಡ ನನಗೆ ಇವಳೇ ಎಲ್ಲವೂ; ನನ್ನ ಆತ್ಮ ಸಖಿ. ಸ್ವರವಿಹಾರಿಗಳು ನಾವಾದೆವು. ಎಂದಾದರೊಮ್ಮೆ ರಘುವಿಗೆ ಇದನ್ನು ಹೇಳಬೇಕು ಎನ್ನಿಸುತ್ತೆ'.

ಹಾಗಿದ್ದರೆ ತಾತ ಆಗಿನ ಕಾಲದಲ್ಲೇ ವಿಧವಾ ವಿವಾಹದ ರೂವಾರಿಯೇ ಆಗಿದ್ದರು ಎಂಬ ಹೆಮ್ಮೆ ಮೂಡಿತು.

ಮತ್ತೊಂದು ಪುಟ ತಿರುವಿದೆ. ಇಸವಿ, ದಿನಾಂಕ ಇತ್ತು. ತಾತನಿಗೆ ಮೂವತ್ತರ ಆಸುಪಾಸಿರಬೇಕು. ಪುಟದ ಶೀರ್ಷಿಕೆ 'ದೇವದತ್ತ ಫಲ' ಎಂದಿತ್ತು.

'ಹಳ್ಳಿಯಿಂದ ಹೋಬಳಿಗೆ ನನಗೆ ವರ್ಗವಾಯಿತು. ಲಕ್ಷ್ಮಿಗೆ ಎಲ್ಲವೂ ಹೊಸದು. ಅವಳಿಗೆ ರಕ್ತಹೀನತೆ, ನಿತ್ರಾಣ